## ಜನರಲ್ ರೆಜ್ಯುಲ್ಯೂಷ್ನ್.

ಬೋರ್ಡಿನವರಿಗೆ ಇತರೇ ಅನೇಕ ಬಾಬುಗಳಿಗಾಗಿ ಹಣ ವದಗಿಸಬೇಕಾದ ಅವಶ್ಯಕತೆ ಇದ್ದೇ ಇರುತ್ತೆ. ಆದ್ದರಿಂದ ಹಾಲಿ ಇರುವ ರಸ್ತೆಗಳನ್ನು ಕ್ರಮವಾಗಿ ಇಟ್ಟುಕೊಳ್ಳಲಿಕ್ಕೇನೆ ಬಹಳ ಕಷ್ಟದಿಂದ ಹಣ ವದಗಿಸುತ್ತಲಿರುತ್ತೆ. ಅಲ್ಲಲ್ಲಿ ಕೆಲವು ಮೈಲಿಗಳ ಫಾಸಲೆ ಕಡಮೆ ಮಾಡಿಕೊಳ್ಳತಕ್ಕ ಉದ್ದೇಶ್ಯದಿಂದ ಅಮುಖ್ಯವಾವ ಸಂಣ ಸಂಣ ಭಂಡಿಜಾಡುಗಳನ್ನು ರಸ್ತೆಗಳನ್ನಾಗಿ ಮಾಡಿದ್ದೆ ಆದರೆ ಇವುಗಳಿಗಿಂತಲೂ ಜನಗಳಿಗೆ ಅತ್ಯಂತ ಉಪಯುಕ್ತವಾವ ಇತರೇ ಕಾಂಗಾರಿಗಳನ್ನು ಬೋರ್ಡಿನವರು ನಿಲ್ಲಿಸಬೇಕಾಗಿ ಬರುತ್ತೆ. ಡಿಸ್ಟ್ರಿಕ್ಟು ಆಮುಳಿ ಇರುವ ಮುಖ್ಯ ಮುಖ್ಯವಾದ ಭಂಡಿ ಜಾಡುಗಳನ್ನು ಸರಿಯಾದ ಸ್ಥಿತೀಲಿ ಇಟ್ಟುರತಕ್ಕ ಭಾಗದಲ್ಲೇನೋ ನಿಗೆ ಕೊಡಲ್ಪಡುತ್ತೆಂತ ಸಹಾ ತೀರ್ಮಾನಿಸಲಾಯಿತು.

### ಮಂಜೂರಾದ ಡಿಸ್ಟ್ರಿಕ್ಟು ಕಾಂಗಾರಿಗಳ ತಖ್ತೆ.

| | | ಮೊಬಲಗು. |
|---|---|---|
| | (1) ಶಿರಾ ತಾಲ್ಲೂಕು.— | ರೂ. |
| 1. | ತರೂರು ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 107. |
| 2. | ಶಿರಾ ಮುನಾಫರಖಾನೆಯಲ್ಲಿ ಬಂದು ಲ್ಯಾಟರ್ಸ ಕಟ್ಟತಕ್ಕ ಬಗ್ಗೆ | 80. |
| 3. | ಶೀಬಿ ಛತ್ರದಲ್ಲಿರುವ ಭಾವಿಯನ್ನು ಆಳಪಡಿಸತಕ್ಕ ಬಗ್ಗೆ | 25. |
| 4. | ಗಜ್ಜರಹಳ್ಳಿ ಬಳಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 150. |
| 5. | ನಿಜಂತಿ ಗ್ರಾಮದಲ್ಲಿನ ಭಾವಿಯನ್ನು ಆಳಪಡಿಸತಕ್ಕ ಬಗ್ಗೆ | 24. |
| 6. | ಕೊಟ್ಟಾ ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 260. |
| 7. | ಪಾತನಾಯಕನಹಳ್ಳಿಯಲ್ಲಿ ಒಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 380. |
| 8. | ಕಳ್ಳಂಬೆಳ್ಳದ ಮುನಾಫರಖಾನೆ ಕಾಂಗಾರಿ ಬಗ್ಗೆ | 400. |
| | ಜುಮ್ಲಾ | 1,426. |
| | (2) ತುಮಕೂರು ತಾಲ್ಲೂಕು.— | |
| | ಚಿಕ್ಕನಾರುವಂಗಲದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 283. |
| | (3) ಮದ್ದಗಿರಿ ತಾಲ್ಲೂಕು.— | |
| 1. | ಅವಿನಮೆಡು ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 160. |
| 2. | ಯರ್ರಗುಂಟೆ ಗ್ರಾಮದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 305. |
| 3. | ಕಲ್ಯಾಪುರದಲ್ಲಿ ಬಂದು ಶೀನೀರು ಭಾವಿ ತೋಡಿಸತಕ್ಕ ಬಗ್ಗೆ | 326. |
| 4. | ತೆರೆಯೂರು ಛತ್ರದ ಕಾಂಗಾರಿ ಬಗ್ಗೆ | 244. |
| | ಜುಮ್ಲಾ | 1,035. |

IV. ಮಲಪ್ಪಾಡಿ ಡಿಸ್ಟ್ರಿಕ್ಟು ಸಡಕು ಕಾಂಗಾರಿಗಳ ಅಂದಾಜಿಗಳ ಲೀಸ್ಟು ಓದಿ ಮಂಜೂರ್ಮಾಡಲಾಯಿತು.

V. ಭಾವಿ ವಗೈರೆ ಕಾಂಗಾರಿಗಳಿಗಾಗಿ ಶಿರಾ ತಾಲ್ಲೂಕಿಗೆ ಮಂಜೂರಾದ 1,453 ರೂಪಾಯಿಗಳನ್ನು ಹಾಲಿ ಕಳುಹಿಸಿರುವ ಅಂದಾಜಿಗಳಲ್ಲಿ ಕಂಡ ಕಾಂಗಾರಿಗಳಿಗೆ ರೀ ಅಪ್ರೊಪ್ರಿಯೇಷ್ನ ಮಾಡಿಕೊಳ್ಳಲು ಮಂಜೂರಿ ಆರ್ಡರ್ ಅಪೇಕ್ಷಿಸಲ್ಪಟ್ಟು ಮದ್ದಗಿರಿ ಸಬ್ ಡಿವಿಜ್ ಆಫಿಸರವರ 23—9—1907ನೆ ಮಾರ್ಕಂ 381ನೆ ನಂಬರು ಯಾದಿ ವಡನೆ ತಲ್ಪಿಡಿ ಶಿರಾ ತಾಲ್ಲೂಕು ಅಮಲ್ದಾರ್ರ 21—9—1907ನೆ ಮಾರ್ಕಂ 135ನೆ ನಂಬರು ರಿಪೋರ್ಟು ಓದಿ ಮಂಜೂರ್ಮಾಡಲಾಯಿತು.

VI. ಯಡಿಯೂರು—ತಿಪಟೂರು ರಸ್ತೇಲಿ ಬಂದು ಟನಲ್ ಹೊಸದಾಗಿ ಪುನಃ ಕಟ್ಟಲು ತಯಾರಾದ 434 ರೂಪಾಯಿಗಳ ಅಂದಾಜು ಓದಿ ಅಪ್ರೂವ್ ಮಾಡಲಾಯಿತು.

VII. ಮುಂದಿನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಸ್ರ 1907ನೆ ಇಸವಿ ಡಿಸೆಂಬರ್ ಮಾಹೇ 1ತಾರೀಖು 3ರಲ್ಲು ಮಧ್ಯಾಹ್ನ 2 ಘಂಟೆಗೆ ನಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಕೆ. ದೊರೆಸ್ವಾಮಿ ಅಯ್ಯರ್,
ಪ್ರೆಸಿಡೆಂಟ್.

## ಮೈಸೂರು ಡಿಸ್ಟ್ರಿಕ್ಟು

### ಇನ್ಸಿ ಹಾರ್ನ್ಮೆಂ.

ತಾರೀಖು 11ನೆ ಅಕ್ಟೋಬರ್ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲ್ಲಾಡು ಹೋಬಳಿಗೆ ಸೇರಿದ ಖಾಯಂ ಗುತ್ತಾ ಮೇಗಡಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1908ನೆ ಜನವರಿ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಸೀಲ್ ಬಗ್ಗೆ ಸ್ರ 1907ನೆ ಇಸವಿ ಅಕ್ಟೋಬರ್ ತಾರೀಖು 31ನೆ ಮಾರ್ಕಂ 43ನೆ ನಂಬರ್ ಮೈಸೂರು ಗೆಜೆಟ್ಟಿನ II ನೆ ಭಾಗದ 515, 516ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 11ನೆ ಅಕ್ಟೋಬರ್ 1907.

ಹುಣಸೂರು ತಾಲ್ಲೂಕು ಪೆರಿಯಾಪಟ್ಟಣದ ಹೋಬಳಿಗೆ ಸೇರಿದ ಜೋಡಿ ಹಟ್ಟಿ ಹೆಬ್ಬಾಗಿಲು ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1907ನೆ ಡಿಸೆಂಬರ್ ಮಾಹೆ 5ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಸೀಲ್ ಬಗ್ಗೆ ಸ್ರ 1907ನೆ ಇಸವಿ ಅಕ್ಟೋಬರ್ 31ನೆ ಮಾರ್ಕಂ 43ನೆ ನಂಬರ್ ಮೈಸೂರು ಗೆಜೆಟ್ಟಿನ II ನೆ ಭಾಗದ 514, 515ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.